# ರಾಮ ನಾಮಾಮೃತವ ಕೊಂಬವರೆಲ್ಲ

**Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.

ರಾಮ ನಾಮಾಮೃತವ ಕೊಂಬವರೆಲ್ಲ
ಪ್ರೇಮದಿಂದಚ್ಯುತನ ಪೇಟೆಗೆ ಬಿನ್ನಿರೆ    ॥ ಪ ॥

ಒಮ್ಮನವೆರಸಿ ಬನ್ನಿ
ನಿಮ್ಮ ಮನಕೆ ಬಂದಂತಳೆದುಕೊಳ್ಳಿ
ರಾಮಟೆಂಕೆಯ ಸಲಿಸಿ ಶ್ರೀ ಕೃಷ್ಣನೆಂಬ
ಧರ್ಮದ ಸಂತೆ ನೆರೆದಿದೆ ಬನ್ನಿ    ॥ ೧ ॥

ಉಂಟು ನಾಲ್ಕು ಕುದುರೆಗಳು
ಎಂಟಾನೆಯ ಬಿರುಬಲೆಯಲ್ಲಿ ಕಟ್ಟಿ ಬಾಹುದು
ಸಾಲ ವರ್ಣದ ಪಟ್ಟೆಯು ಏಳಿರೆ
ಏಳು ಲೋಕವು ಬಲ್ಲದು    ॥ ೨ ॥

ಬೆಲೆಯಿಲ್ಲದ ಮುತ್ತುಂಟು
ಏಳೇಳ್ಪುಟಿಯ ಹೊಳೆವ-ಪರಂಜಿಯ ಚಿನ್ನವುಂಟು
ಥಳ ಥಳಿಸುವ ನೀಲಿಯ ಕೊಂಬುವರೆಲ್ಲ
ನಾಳಿನನಾಭನ ಸನ್ನಿಧಿಗೆ ಬನ್ನಿ    ॥ ೩ ॥

ಎರಡು ರಾಶಿಯಲಳೆವ ಕೊಳಗವು
ಪಿರಿದುದೊಂದು ಕಿರಿದುದೊಂದು ಉಂಟಲ್ಲಿಗೆ
ಗರಳವ ಪೊರಿಸಲು ರತ್ನವು
ಮರುತಾಶ್ರಯನ ಸನ್ನಿಧಿಗೆ    ॥ ೪ ॥

ಆರಂಗಡಿಯ ಸುಟ್ಟು

ಸೂರೆಮಾಡಿ ಏಳು ಎಂಟು ಹಟ್ಟಿಕೊರವನೊ….ದುದು
ಸಾರಿಸಿ ನವ-ವಿಧ ಶುಚಿಯ ಹೇಳಿದ
ಸರ್ವಾತ್ಮಗೆ ಸೌದೆಯ    ॥ ೫ ॥

ಸುಂಕಿಗರೈವರಿಗೆ ಹರುಷದಿಂದ
ಪಂಕಜ ನಾಭನ ಚೀಲ ತೋರಿ
ಶಂಕೆಯಿಲ್ಲದೆ ನಡೆವ ಅವರನ್ನೆಲ್ಲ
ವಂಚಿಸಿ ಎದೆಯ ಟೊಣೆದು ಹೋಗುವಾ    ॥ ೬ ॥

ಇಂದೊಂದು ಸರಶಿಗೆ ಬಹಳ ಲಾಭ ತಾ-
ತಂದು ಕುಳಿತುಂಬುದಕೆ ಉಂಟು
ತಂದೆ ಪುರಂದರ ವಿಠ್ಠಲ ರಾಯ
ಗಂದವಾಯಿತು ಬೇಹಾರವು    ॥ ೭ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇದೊಂದು ಅಪೂರ್ವವಾದ ಹಾಡು. ರಾಮ ನಾಮವೆಂಬ ಅಮೃತವನ್ನು ಕೊಳ್ಳುವವರನ್ನೆಲ್ಲ "ಅಚ್ಯುತನ ಪೇಟೆಗೆ" ಬನ್ನಿ ಎಂದು ದಾಸರು ಎಲ್ಲರನ್ನು ಕರೆದಿದ್ದಾರೆ.

೧. **ಅಚ್ಯುತ** = ದೇವರ ಪೇಟೆ, ನಾಶ ರಹಿತ ಪೇಟೆ

**ಒಮ್ಮನ** = ಒಂದೇ ಮನಸ್ಸು, ಒಂದು ಅಳತೆ

**ರಾಮ ಟೆಂಕೆ** = ನಾಣ್ಯದ ಹೆಸರು

೨. **ನಾಲ್ಕು ಕುದುರೆ** = ಚತುರ್ವಿಧ ಪುರುಷಾರ್ಥ

**ಎಂಟಾನೆ** = ಅಷ್ಟ ಮದಗಳು

**ಏಳು ವರ್ಣದ ಪಟ್ಟಿಕೆ** = ಸಪ್ತ ವ್ಯಸನಗಳು

೩. **ಅಪರಂಜಿ** = ಶುದ್ಧ ಬಂಗಾರ

**ನೀಲ** = ನೀಲ ರತ್ನ, ಶ್ರೀ ಹರಿಯ ವರ್ಣ

೪. **ಕೊಳಗ** = ಒಂದು ಅಳತೆ

**ಗರಳವರಸಲು ರತ್ನ =** ವಿಷ ನಾಶಕ ರತ್ನ

**ಮರುತಾಶ್ರಯ =** ಶ್ರೀ ಹರಿ

**೫.** **ಆರಂಗಡಿ =** ಷಡ್ರಿಪುಗಳು

**ಏಳು ಎಂಟು =** ಸಪ್ತ ವ್ಯಸನ, ಅಷ್ಟ ಮದ

**ನವ-ವಿಧ =** ನವವಿಧ ಭಕ್ತಿ

**ವಿ.ಸೂ: -** ಈ ನುಡಿಯ ಅರ್ಥ ಸ್ಪಷ್ಟವಾಗುವುದಿಲ್ಲ

**೬.** **ಸುಂಕಿಗಳೈವರು =** ಪಂಚೇಂದ್ರಿಯ

**ಟೊಣೆ =** ಹೊಡೆ

**ಬೇಹಾರ =** (ತ್ಸ - ವ್ಯವಹಾರ)

**Classification:** Mundige
**Ankita:** tande purandara vittala
**Location:** NA
**Category:** Rama Stuti, Nama Mahatme
**Sub-Category:** rama, amruta, prema, achyuta, Krishna, sante, mana, dharma, kudure, gaja, loka, bangara, santosha,
**Pravachana:** NA
**Explanation:** NA